**<u>ದಿನಾಂಕಃ10-10-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು</u>**

<u>ಪಾಟೀ ಸವಾಲು: ಶ್ರೀ ಸಿ.ಕೆ.ಎಸ್., ವಾದಿ ಪರ ವಕೀಲರಿಂದ</u>

ರೂ.5,40,000/- ಹಣವನ್ನು ಪಡೆದಿರುವುದಿಕ್ಕೆ ವಾದಿಯೇ ಸ್ವತಃ ದಾಖಲೆಯನ್ನು ಬರೆದುಕೊಡಬೇಕು ಎಂದು ಕೇಳಿರುತ್ತೇನೆ. ವಾದಿಯು ನಾನು ಬರೆಯುವುದಿಲ್ಲ ನಾನು ಹೇಳಿ ಬರೆಸಿ ಸಹಿ ಮಾಡಿ ಕೊಡುತ್ತೇನೆ ಎಂದು ಹೇಳಿರುತ್ತಾರೆ. ಸದರಿ ಹೇಳಿಕೆಯನ್ನು ನಾನು ತಿರಸ್ಕರಿಸಿರುವುದಿಲ್ಲ. ನಿಡಿ.1 ರಲ್ಲಿ ನನ್ನದಾಗಲೀ ಅಥವಾ ನನ್ನ ಹೆಂಡತಿ ಮಮತರವರ ಸಹಿ ಇರುವುದಿಲ್ಲ ಎಂದರೆ ಸರಿ. ಸದರಿ ನಿಡಿ.1 ನ್ನು ನನ್ನ ಹಾಗೂ ನನ್ನ ಹೆಂಡತಿಯ ಸಮಕ್ಷಮ ಬರೆದಿರುವುದಾಗಿ ಅದರಲ್ಲಿ ನಮೂದು ಆಗಿರುವುದಿಲ್ಲ ಎಂದರೆ ಸರಿ. ವಾದಿಯು ವಾರಿಯರ್ಸ್ ಸ್ಕೂಲ್ ನ ಬಸ್ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಅವರು ಸುಮಾರು 40-50 ವರ್ಷಗಳಿಂದಲೂ ಚಳ್ಳಕೆರೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಎಷ್ಟು ವರ್ಷಗಳಿಂದ ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಗೆ ಕನ್ನಡ ಚೆನ್ನಾಗಿ ಮಾತನಾಡಲು ಮತ್ತು ಬರೆಯಲು ಬರುತ್ತದೆ ಎಂದರೆ ಸಾಕ್ಷಿಯು ಮಾತನಾಡಲು ಬರುತ್ತದೆ, ಆದರೆ ಬರೆಯುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ.1 ನ್ನು ನಾನೇ ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನಾನು ಹಾಜರು ಪಡಿಸುವ ಮುಂಚೆ ನಿಡಿ.1 ನನ್ನ ಸ್ವಾಧೀನದಲ್ಲಿತ್ತು. ನಿಡಿ.1 ರ ಸ್ಟ್ಯಾಂಪ್ ಮೇಲಿರುವ ಸಹಿ ಹಾಗೂ ಅದರ ಕೆಳಗೆ ಇರುವ ಸಹಿ ಬೇರೆ ಬೇರೆಯಾಗಿರುತ್ತದೆ ಎಂದರೆ ಸಾಕ್ಷಿಯು ಒಂದೇ ಎಂದು ಉತ್ತರಿಸುತ್ತಾರೆ. ನಿಡಿ.1 ರ ದಾಖಲೆಯನ್ನು ವಾದಿ ಬರೆಸಿ ಕೊಟ್ಟಿರುವುದಿಲ್ಲ ಹಾಗೂ ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸುಳ್ಳು. ರೂ. 5,40,000/- ಹಣ ನನಗೆ ದೊಡ್ಡ ಮೊತ್ತ. ಸಾಲದ ಭದ್ರತೆಗಾಗಿ ನೀಡಿದ ಎರಡು ಚೆಕ್ಕುಗಳನ್ನು ಸದರಿ ಹಣವನ್ನು ನೀಡುವ ಸಮಯದಲ್ಲಿ ವಾಪಾಸು ಕೇಳಿರುವುದಿಲ್ಲ. ಎರಡು ಚೆಕ್ಕುಗಳನ್ನು ವಾಪಾಸು ಕೊಡಿ ಎಂದು ಮತ್ತು 1 ಲಕ್ಷ ರೂಗಳಿಗೆ ಪ್ರತ್ಯೇಕ ಚೆಕ್ ನೀಡುತ್ತೇನೆ ಎಂದು ಕೇಳಿರುತ್ತೇನೆ. ಎರಡು ಚೆಕ್ಕುಗಳನ್ನು ವಾಪಾಸು ನೀಡದಿದ್ದರೂ ನಾನು ಹಣವನ್ನು ಕೊಡಲು ತಿರಸ್ಕರಿಸಿರುವುದಿಲ್ಲ. ನಿಡಿ.1 ನ್ನು ನಾನು ಸಾಕ್ಷಿ ಹೇಳುವ ಮೊದಲೇ ವಕೀಲರಿಗೆ ನೀಡಿದ್ದು, ಅದನ್ನು ಯಾವಾಗ ನೀಡಿರುತ್ತೇನೆ ಎಂದು ಅಂದಾಜು ಸಹಾ ಹೇಳಲು ಸಾಧ್ಯವಿಲ್ಲ. ದಿನಾಂಕಃ 01.10.2014 ರಲ್ಲಿ ಸಾಲವಾಗಿ ಪಡೆದ 4,00,000/- ರೂಪಾಯಿಗಳಿಗೆ ಬಡ್ಡಿಯ ಬಗ್ಗೆ ಯಾವುದೇ ಪತ್ರ ಬರವಣಿಗೆ ಆಗಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ

2 ನೇ ಪುಟದ ಸಾಲಿನಲ್ಲಿ ಹೇಳಿದಂತೆ ಸದರಿ ದಿನದಂದು ವಾದಿಗೆ ನೀಡಿದ ಖಾಲಿ ಚೆಕ್ ಗಳ ಬಗ್ಗೆ ಯಾವುದೇ ತರಹದ ಪತ್ರ ಬರವಣಿಗೆ ಆಗಿರುವುದಿಲ್ಲ. ದಿನಾಂಕಃ 30.03.2017 ರ ಮುಂಚೆ ನನ್ನ ಮತ್ತು ನನ್ನ ಹೆಂಡತಿಯ ಸಾಲಗಳ ಬಗ್ಗೆ ಹೇಳಲು ಸಾಧ್ಯವಿಲ್ಲ. ಸಾಕ್ಷಿಯು ನಿಪಿ.7 ರಲ್ಲಿನ ಎಲ್ಲಾ ಪುಟಗಳಲ್ಲು ಇರುವ ತನ್ನ ಹಾಗೂ ತನ್ನ ಹೆಂಡತಿಯ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.7(ಎ) ಮತ್ತು ನಿಪಿ.7(ಬಿ) ಅಂತಾ ಗುರುತಿಸಲಾಯಿತು. ನಿಪಿ.7 ರಂತೆ ದಿನಾಂಕಃ 24.08.2017 ರಲ್ಲಿ ನಮ್ಮ ನಿವೇಶನ ಸಂಖ್ಯೆ. 7 ನ್ನು ಶಿವಲಿಂಗಾಚಾರ್ ರವರಿಗೆ ರೂ.6,25,000/- ಗಳಿಗೆ ಮಾರಾಟ ಮಾಡಿರುತ್ತೇವೆ. ಸದರಿ ಸೈಟಿನ ಪಶ್ಚಿಮ ದಿಕ್ಕನ್ನು ಮಾತ್ರ ಮಾರಾಟ ಮಾಡಿದ್ದು ಪೂರ್ವ ದಿಕ್ಕನ್ನು ಹಾಗೆಯೇ ಉಳಿಸಿಕೊಂಡಿರುತ್ತೇವೆ ಎಂದರೆ ಸರಿ. ಮಾರಾಟ ಮಾಡುವ ಪೂರ್ವದಲ್ಲಿ ಸದರಿ ನಿವೇಶನದ ಖಾತೆಯು ನನ್ನ ಹೆಂಡತಿ ಮಮತಾ ರವರ ಹೆಸರಿನಲ್ಲಿತ್ತು. ಮಾರಾಟ ಮಾಡಿದ ದಿನಕ್ಕೆ ನನ್ನ ಹಾಗೂ ನನ್ನ ಹೆಂಡತಿಯ ಕೈಯಲ್ಲಿ ಎಷ್ಟು ಹಣ ಇತ್ತು ಎಂದು ಹೇಳಲು ಸಾಧ್ಯವಿಲ್ಲ. ನಿಪಿ.7 ರಲ್ಲಿನ ವಿಚಾರವನ್ನು ಪತ್ರ ಬರಹಗಾರರಿಗೆ ನಾನು ಹೇಳಿರುತ್ತೇನೆ. ಸದರಿ ಪತ್ರದಲ್ಲಿ ನಮ್ಮ ಕುಟುಂಬದ ಸಾಲದ ತೀರುವಳಿಗಾಗಿ ನಿವೇಶನವನ್ನು ಮಾರುತ್ತಿದ್ದೇವೆ ಎಂದು ಬರೆಸಿರುತ್ತೇವೆ ಎಂದರೆ ಸರಿ. ನಿಪಿ.5 ರಂತೆ ಪ್ರತಿವಾದಿಗೆ ನೋಟೀಸ್ ಜಾರಿ ಮಾಡಿದ ಬಗ್ಗೆ ನನಗೆ ತಿಳುವಳಿಕೆ ಇಲ್ಲ. ಸದರಿ ನೋಟೀಸಿಗೆ ಪ್ರತಿವಾದಿ ಉತ್ತರವನ್ನು ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ.5 ರಂತೆ ನೋಟೀಸ್ ನೀಡಿದ ಮೇಲೆ ನಮ್ಮ ನಿವೇಶನದ ಪಶ್ಚಿಮ ದಿಕ್ಕಿನ ಜಾಗವನ್ನು ದಿನಾಂಕಃ 24.08.2017 ರಂದು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ನಿಪಿ.8 ರಂತೆ ನಿವೇಶನ ಸಂಖ್ಯೆ 7 ರ ಪೂರ್ವ ದಿಕ್ಕಿನ ಖಾಲಿ ಜಾಗವನ್ನು ಆಧಾರ ಮಾಡಿ ಎಲ್. ರುದ್ರಮುನಿಯಪ್ಪ ರವರಿಂದ ಸಾಲ ಪಡೆದಿರುತ್ತೇವೆ ಎಂದರೆ ಸರಿ. ಸದರಿ ನಿಪಿ.8 ಸಾಲಕ್ಕಾಗಿ ಬರೆದ ಪತ್ರವಲ್ಲ ಕ್ರಯ ಕರಾರು ಪತ್ರ ಎಂದರೆ ಸಾಲಕ್ಕಾಗಿ ಬರೆದುಕೊಟ್ಟಿರುತ್ತೇವೆ. ನಿಪಿ.8 ರಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿ.8 ನ್ನು ಮಮತ ರವರು ಸಾಲ ಪಡೆದ ಕಾರಣ ಬರೆದುಕೊಟ್ಟಿರುತ್ತಾರೆ. ಎಲ್. ರುದ್ರಮುನಿಯಪ್ಪ ರವರಿಂದ ರೂ. 5 ಲಕ್ಷ ಸಾಲವನ್ನು ಪಡೆದಿರುತ್ತೇವೆ. ಸದರಿ ಸಾಲ ಪಡೆದ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಬರುವುದಿಲ್ಲ. ಸದರಿ ಸಾಲಕ್ಕೆ ನಿಪಿ.8 ನ್ನು ಬರೆದು ಕೊಡುವ ವೇಳೆ ಅಸಲು ಮತ್ತು ಬಡ್ಡಿ ಎಷ್ಟು ಆಗಿತ್ತೆಂದು ಹೇಳಲು ಸಾಧ್ಯವಿಲ್ಲ. ನನಗೆ ಕನ್ನಡ ಓದಲು ಬರುತ್ತದೆ. ನಿಪಿ.8 ರಂತೆ ಪೂರ್ವ ದಿಕ್ಕಿನ ಖಾಲಿ

ನಿವೇಶನವನ್ನು ರೂ. 12 ಲಕ್ಷ ಗಳ ಪ್ರತಿಫಲಕ್ಕಾಗಿ ಕ್ರಯ ಕರಾರು ಆಗಿದ್ದು, ರೂ. 6 ಲಕ್ಷವನ್ನು ಮುಂಗಡವಾಗಿ ಪಡೆದಿರುವುದಾಗಿ ಇರುತ್ತದೆ ಎಂದರೆ ನಾವು ಸಾಲದ ಬಗ್ಗೆ ಪತ್ರ ಬರೆದುಕೊಟ್ಟಿರುತ್ತೇವೆ ಎಂದು ಉತ್ತರಿಸುತ್ತಾರೆ. ನಿವೇಶನ ಸಂಖ್ಯೆ 7 ರ ನಿವೇಶನವನ್ನು ಮಾರಾಟ ಮಾಡದಂತೆ ಈ ದಾವೆಯಲ್ಲಿ ತಾತ್ಕಾಲಿಕ ನಿರ್ಬಂದಕಾಜ್ಞೆ ನೀಡಲಾಗಿರುವ ಬಗ್ಗೆ ನನಗೆ ಮತ್ತು ನನ್ನ ಹೆಂಡತಿಗೆ ಮಾಹಿತಿ ಇಲ್ಲ. ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಲು ಪ್ರತಿವಾದಿ ಮಮತ ರವರು ಮಾಹಿತಿಯನ್ನು ನೀಡಿರುತ್ತಾರೆ. ಆಸ್ತಿಯನ್ನು ಮಾರಾಟ ಮಾಡದಂತೆ ವಾದಿಯು ನೊಂದಣಿ ಅಂಚೆಯ ಮೂಲಕ ನಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

**( ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.